# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1670
ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ನಗರ ಜಿಲ್ಲೆಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅವಧಿ ಮೀರಿರುವ ವಾಹನಗಳ ಸಂಖ್ಯೆ ಎಷ್ಟು ಹಾಗೂ ಸಾರಿಗೆಗೆ ಯೋಗ್ಯವಲ್ಲದ ವಾಹನಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ;(ವಿವರ ನೀಡುವುದು); | ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ:GSR 29 (E), ದಿನಾಂಕ:16.01.2023ರನ್ವಯ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದನುಸಾರ ಸಾರಿಗೆ ನಿಗಮಗಳ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15ವರ್ಷ ವಯೋಮಾನವನ್ನು ನಿಗದಿಪಡಿಸಲಾಗಿರುತ್ತದೆ.<br><br>ಅದರಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ/ನಿಗಮಗಳಲ್ಲಿನ ಅವಧಿ ಮೀರಿರುವ ಯಾವುದೇ ಬಸ್ಸುಗಳು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>ಮುಂದುವರೆದು, ಕ.ರಾ.ರ.ಸಾ.ನಿಗಮದ ಸುತ್ತೋಲೆ ಸಂಖ್ಯೆ:810/2023 ದಿನಾಂಕ:23.09.2023ರನ್ವಯ ನಿಗಮದಲ್ಲಿನ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲು **'ಅನುಬಂಧ"ದಲ್ಲಿ** ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ.<br><br>ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿ.ಮೀ. ಕ್ರಮಿಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳಿಗೆ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>ಆದಾಗ್ಯೂ, ಪ್ರತಿ ವರ್ಷ ನಿಗಮದ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಪ್ರಸ್ತುತ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ. |
| ಆ. | ಅವಧಿ ಮೀರಿರುವ ವಾಹನಗಳು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಬೇಕಾಗಿರುವ ವಾಹನಗಳ ಸಂಖ್ಯೆ ಎಷ್ಟು; (ವಿವರ ನೀಡುವುದು); | ರಾಜ್ಯ ರಸ್ತೆ ಸಾರಿಗೆ ಸಂಸ್ಥೆ/ನಿಗಮಗಳಲ್ಲಿ ಅವಧಿ ಕೇಂದ್ರ ಸರ್ಕಾರದ ನೀತಿಯನ್ವಯ ಹಳೆಯವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಅವಶ್ಯಕವಿರುವ ಬಸ್ಸುಗಳ ವಿವರ ಕೆಳಕಂಡಂತಿರುತ್ತದೆ.<br><br>ಕ.ರಾ.ರ.ಸಾ. ನಿಗಮ — 1500<br>ಬೆಂ.ಮ.ನ.ಸಾ. ಸಂಸ್ಥೆ — 800<br>ವಾ.ಕ.ರ.ಸಾ. ಸಂಸ್ಥೆ — 700<br>ಕ.ಕ.ರ.ಸಾ.ನಿಗಮ — 750<br>**ಒಟ್ಟು** — **3750** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:

| ಸಂಸ್ಥೆಗಳು | 2023-24 (Jan) | 2024-25 | 2025-26 | ಒಟ್ಟು |
|---|---|---|---|---|
| ಕ.ರಾ.ರ.ಸಾ. ನಿಗಮ | 510 | 698 | 10+60* +45** | 1323 |
| ಬೆಂ.ಮ.ಸಾ. ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | - | 2365 |
| | 341 ಇ.ವಿ | 755 ಇ.ವಿ | 429 ಇ.ವಿ | |
| ವಾ.ಕ.ರ.ಸಾ. ಸಂಸ್ಥೆ | 296 | 560 | 11+ 354*** | 1221 |
| ಕ.ಕ.ರ.ಸಾ. ನಿಗಮ | 720 | 307 | 146 | 1173 |
| **ಒಟ್ಟು** | **1887** | **3140** | **1055** | **6082** |

*ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ನಾನ್ ಎ.ಸಿ. ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

** ನಿಗಮಕ್ಕೆ 45 ಸಂಖ್ಯೆಯ ಕರ್ನಾಟಕ ಸಾರಿಗೆ ಮಾದರಿಯ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

***ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 354 ಹೊಸ ಬಸ್‌ಗಳನ್ನು ಖರೀದಿಸಲು ಖರೀದಿ ಆದೇಶ ನೀಡಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಸಾರಿಗೆ ನಿಗಮಗಳಿಗೆ ಸೇರ್ಪಡೆಗೊಳ್ಳಲಿರುವ ಒಟ್ಟು ಬಸ್‌ಗಳು ವಿವರ ಕೆಳಕಂಡಂತಿರುತ್ತದೆ:

| ಸಂಸ್ಥೆ/ನಿಗಮ | ಬಸ್‌ಗಳ ಸಂಖ್ಯೆ | ಬಸ್‌ಗಳ ವಿವರ |
|---|---|---|
| ಕ.ರಾ.ರ.ಸಾ.ನಿಗಮ | 644 | 500 ಗ್ರಾಮಾಂತರ+ 144 ಡಬಲ್ ಡೋರ್ (ನಗರ) |
| ವಾ.ಕ.ರ.ಸಾ.ಸಂಸ್ಥೆ | 150 | ಗ್ರಾಮಾಂತರ ಬಸ್‌ಗಳು |
| ಕ.ಕ.ರ.ಸಾ.ನಿಗಮ | 56 | ವಿವಿಧ ರೀತಿಯ ಪ್ರೀಮಿಯಂ ಬಸ್‌ಗಳು |
| **ಒಟ್ಟು** | **850** | |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 469(iii)ರಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ 2000 ಸಂಖ್ಯೆಯ ಹೊಸ ಡೀಸೆಲ್ ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದು ಘೋಷಿಸಿದ್ದು, ಅದರನ್ವಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 700 ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400ರಂತೆ, ಒಟ್ಟು 2000 ಸಂಖ್ಯೆಯ ಹೊಸ ಬಿ.ಎಸ್-VI ಡೀಸೆಲ್ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.<br><br>ಅದರಲ್ಲಿ ಈಗಾಗಲೇ 300 ಡೀಸೆಲ್ ಬಸ್ಸುಗಳನ್ನು ರೂ.12353.00 ಲಕ್ಷಗಳ ಅನುದಾನದಲ್ಲಿ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 21 ಟಿಸಿಬಿ 2025, ದಿನಾಂಕ:21.04.2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸರ್ಕಾರದಿಂದ ನೀಡಿದ ರೂ.123.53 ಕೋಟಿ ಅನುದಾನದಲ್ಲಿ 330 ಬಸ್ಸುಗಳನ್ನು ಖರೀದಿಸಲು ಖರೀದಿ ಆದೇಶ ನೀಡಲಾಗಿದ್ದು, ಮಾರ್ಚ್-2026ರೊಳಗೆ ಎಲ್ಲಾ ಬಸ್‌ಗಳು ನಿಗಮಕ್ಕೆ ಸೇರ್ಪಡೆಗೊಳ್ಳಲಿವೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 150 ಸಂಖ್ಯೆಯ ಪೂರ್ಣ ನಿರ್ಮಿತ ಬಿ.ಎಸ್-VI ಕರ್ನಾಟಕ Mofussil ಸಾರಿಗೆ ಬಸ್ಸುಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 33 ಟಿಸಿಬಿ 2025, ದಿನಾಂಕ: 30.01.2026ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕುರಿತು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿದ 620 ಬಸ್ಸುಗಳಿಗೆ ಅನುದಾನ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br><br>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಒಟ್ಟು 750 ವಿದ್ಯುತ್ ಚಾಲಿತ ಬಸ್ಸುಗಳು ಮತ್ತು PM e-drive ಯೋಜನೆಯಡಿ ಬೆಂ.ಮ.ಸಾ.ಸಂಸ್ಥೆಗೆ 4500 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ.<br><br>2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480 ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ.</td><td>ವೋಲ್ವೋ ವಾಹನಗಳು ಸಂಚಾರಕ್ಕೆ ಯೋಗ್ಯವಾಗಿರಲು ಎಷ್ಟು ಕಿ.ಮೀ.ಗಳನ್ನು ನಿಗದಿಪಡಿಸಿದೆ ಹಾಗೂ ಸಂಚರಿಸುತ್ತಿರುವ ವೋಲ್ವೋ ವಾಹನಗಳ ಸಂಖ್ಯೆ ಎಷ್ಟು;</td><td>ರಾಜ್ಯ ಸಾರಿಗೆ ನಿಗಮ/ಸಂಸ್ಥೆಗಳಲ್ಲಿನ ವೋಲ್ವೋ ವಾಹನಗಳನ್ನು ನಿರುಪಯುಕ್ತಗೊಳಿಸಲು ಅನುಬಂಧದಲ್ಲಿ ತಿಳಿಸಿರುವ ಮಾನದಂಡಗಳನ್ವಯ ಕಿ.ಮೀ. ಹಾಗೂ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ.<br>ರಾಜ್ಯ ರಸ್ತೆ ಸಾರಿಗೆ ಸಂಸ್ಥೆ/ನಿಗಮಗಳಲ್ಲಿ ಪ್ರಸ್ತುತ ಸಂಚರಿಸುತ್ತಿರುವ ವೋಲ್ವೋ ವಾಹನಗಳ ವಿವರಗಳು ಕೆಳಕಂಡಂತಿರುತ್ತವೆ:<br>
<table>
<tr><td>ಕ.ರಾ.ರ.ಸಾ ನಿಗಮ</td><td>321</td></tr>
<tr><td>ಬೆಂ.ಮ.ಸಾ. ಸಂಸ್ಥೆ</td><td>352</td></tr>
<tr><td>ವಾ.ಕ.ರ.ಸಾ. ಸಂಸ್ಥೆ</td><td>36</td></tr>
<tr><td>ಕ.ಕ.ರ.ಸಾ. ನಿಗಮ</td><td>06</td></tr>
<tr><td>ಒಟ್ಟು</td><td>715</td></tr>
</table></td></tr>
<tr><td>ಈ.</td><td>ತುರ್ತಾಗಿ ಹಳೆಯ ವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ ವ್ಯವಸ್ಥೆ ಮಾಡಲು ಎಷ್ಟು ವೋಲ್ವೋ ಬಸ್ಸುಗಳ ಅವಶ್ಯಕತೆ ಇದೆ? (ವಿವರ ನೀಡುವುದು);</td><td>ಹಳೆಯ ವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ ವ್ಯವಸ್ಥೆ ಮಾಡಲು ಅವಶ್ಯಕವಿರುವ ವೋಲ್ವೋ ಬಸ್ಸುಗಳ ವಿವರ ಕೆಳಕಂಡಂತಿರುತ್ತವೆ:<br>
<table>
<tr><td>ಕ.ರಾ.ರ.ಸಾ ನಿಗಮ</td><td>15</td></tr>
<tr><td>ಕ.ಕ.ರ.ಸಾ. ನಿಗಮ</td><td>20</td></tr>
<tr><td>ಒಟ್ಟು</td><td>35</td></tr>
</table>
ಪ್ರಸ್ತುತ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಯಾವುದೇ ಹೊಸ ವೋಲ್ವೋ ಬಸ್ಸುಗಳಿಗೆ ಬೇಡಿಕೆ ಇರುವುದಿಲ್ಲ.</td></tr>
</table>

ಸಂಖ್ಯೆ: ಟಿಡಿ 103 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ

| ಕ್ರ.ಸಂ | ವಾಹನ ತಯಾರಿಕೆ/ ಮಾದರಿ | ಪರಿಷ್ಕರಿಸಿ, ನಿಗದಿಪಡಿಸಿರುವ ಕಿ.ಮೀ. /ವರ್ಷ |
|---|---|---|
| 1 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಕರ್ನಾಟಕ ಸಾರಿಗೆ, ರಾಜಹಂಸ / ವೈಭವ, ನಾನ್ ಎ.ಸಿ. ಸ್ಲೀಪರ್ ವಾಹನಗಳು (ಮಿಡಿ, ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ) | **11.00 ಲಕ್ಷ ಕಿ.ಮೀ. ಅಥವಾ 15 ವರ್ಷ** |
| 2 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು.(ಕಾರು/ಜೀಪು ಹೊರತುಪಡಿಸಿ) | **9.00 ಲಕ್ಷ ಕಿ.ಮೀ. ಅಥವಾ 15 ವರ್ಷ** |
| 3 | ವೋಲ್ವೋ ನಗರ ಸಾರಿಗೆ ವಾಹನಗಳು | **13.00 ಲಕ್ಷ ಕಿ.ಮೀ. ಅಥವಾ 15 ವರ್ಷ** |
| 4 | ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು | **15.00 ಲಕ್ಷ ಕಿ.ಮೀ. ಅಥವಾ 15 ವರ್ಷ** |
| 5 | ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು | **13.00 ಲಕ್ಷ ಕಿ.ಮೀ. ಅಥವಾ 15 ವರ್ಷ** |
| 6 | ಸ್ಕ್ಯಾನಿಯ ಸೀಟರ್ ವಾಹನಗಳು | **13.00 ಲಕ್ಷ ಕಿ.ಮೀ. ಅಥವಾ 15 ವರ್ಷ** |
| 7 | ಕರೋನಾ ಎ.ಸಿ. ಮತ್ತು ನಾನ್ ಎ.ಸಿ. ಸ್ಲೀಪರ್ ವಾಹನಗಳು | **11.00 ಲಕ್ಷ ಕಿ.ಮೀ. ಅಥವಾ 15 ವರ್ಷ** |

ಮುಖ್ಯ ಯಾಂತ್ರಿಕ ಅಭಿಯಂತರರು



le No. TD/216/TCQ/2025-Sec 1-Trans (Computer No. 1975871)
enerated from eOffice by Shilpa M Sudi, TD-SO-ASST(SMS), ASSISTANT, TRANSPORTSEC on 05/12/2025 02:54 PM